ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎಲ್.ಜಿ.ಜಿ.ಸ ವಕೀಲರಿಂದಃ-

1991 ರಲ್ಲಿ ಗುರುಮೂರ್ತಪ್ಪನ ಮಗ ಶ್ರೀನಿವಾಸಯ್ಯ ಎನ್ನುವವರಿಗೆ 1 ಎಕರೆ 20 ಗುಂಟೆಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯ ಪತ್ರದ ಚಕ್ಬಂದಿ ಪೂರ್ವಕ್ಕೆ ಆಂದಾನಯ್ಯನವ ಜಮೀನು, ಪಶ್ಚಿಮಕ್ಕೆ ನನ್ನ ಉಳಿಕೆ ಜಮೀನು, ಉತ್ತರಕ್ಕೆ ಮುನಿಯಾಬೋವಿ ಜಮೀನು ಮತ್ತು ದಕ್ಷಿಣಕ್ಕೆ ಕೊಂಡಯ್ಯನವರ ಜಮೀನು ಎಂದು ಇರುತ್ತದೆ. ಸದರಿ ಚಕ್‌ಬಂದಿಗೆ ಒಳಪಟ್ಟ ಜಮೀನಿನ ಪೂರ್ವಕ್ಕೆ ಸರ್ವೇ ನಂಬರ್ 107 ಆಂದಾನಯ್ಯನವರ ಜಮೀನು ಇರುತ್ತದೆ ಆದರೆ 108 ರ ಜಮೀನು ಇರುವುದಿಲ್ಲಎಂದರೆ ಸರಿಯಲ್ಲ. ಮೇಲೆ ಹೇಳಿದ ಶ್ರೀನಿವಾಸಯ್ಯನವರೇ ಅವರ ಖರೀದಿಸಿದ 1 ಎಕರೆ 20 ಗುಂಟೆ ಜಮೀನನ್ನು ಪುಟ್ಟಸ್ವಾಮಯ್ಯನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಚಕ್ಬಂದಿ ಪೂರ್ವಕ್ಕೆ ಆಂದಾನಯ್ಯನವ ಜಮೀನು, ಪಶ್ಚಿಮಕ್ಕೆ ಚಂದ್ರಪ್ಪನವರ ಜಮೀನು (ನನ್ನ ಜಮೀನು), ಉತ್ತರಕ್ಕೆ ಮುನಿವೆಂಕಟಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ಜಮೀನು ಎಂದು ಗೋಮಾಳ ಇರುತ್ತದೆ. ಸದರಿ ಕ್ರಯ ಪತ್ರದ ಆಧಾರ ಮೇಲೆ ಪುಟ್ಟಸ್ವಾಮಯ್ಯನವರ ಹೆಸರಿಗೆ 1 ಎಕರೆ 20 ಗುಂಟೆ ಜಮೀನನ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪುಟ್ಟಸ್ವಾಮಯ್ಯನವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ನಾನು ಕಂದಾಯ ಇಲಾಖೆಯಲ್ಲಿ ರೆವಿನ್ಯೂ ಇನ್ಸ್-ಪೆಕ್ಟರ್ ಆಗಿ

ಕೆಲಸ ನಿರ್ವಹಿಸಿರುತ್ತೇನೆ ಎಂದರೆ ಸರಿ. ನಾನು 2011 ನಿವೃತ್ತಿ ಹೊಂದುವ ಸಮಯದಲ್ಲಿ ರಾಮನಗರದಲ್ಲಿ ಕೆಲಸ ಮಾಡುತ್ತಿದ್ದೆ.

ಶಿವನಹಳ್ಳಿ ಗ್ರಾಮದ ಸರ್ವೇ ನಂಬರ್ 108 ರ ಅಳತೆ, ದಾಖಲೆಗಳ ಬಗ್ಗೆ ನನಗೆ ಎಲ್ಲಾ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಆಸುಪಾಸಿನಲ್ಲಿ ಯಾರ ಯಾರು ಜಮೀನು ಇರುತ್ತದೆ ಮತ್ತು ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸಹ ನನಗೆ ತಿಳಿದಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 108 ರ ಪಶ್ಚಿಮ ಮತ್ತು ಉತ್ತರಕ್ಕೆ ವಿಭೂತಿಕರೆ ಗ್ರಾಮದ ಗಡಿ ಇರುತ್ತದೆ. ಸದರಿ ಸರ್ವೇ ನಂಬರ್ ನ ಉತ್ತರ ಮತ್ತು ಪಶ್ಚಿಮಕ್ಕೆ ನಾನು ಮತ್ತು ವಾದಿರವರು ತಲಾ 1 ಎಕರೆ 20 ಗುಂಟೆ ಸ್ವಾಧೀನದಲ್ಲಿ ಇರುತ್ತೇವೆ. ವಿಭೂತಿಕೆರೆ ಗಡಿಯಲ್ಲಿ ಇರುವ ಸರ್ವೇ ನಂಬರ್ 356 ರ ಜಮೀನು ಯಾರು ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದು ಗೋಮಾಳ ಎಂದು ಬರುತ್ತಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಗೋಮಾಳದಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ಹೇಳಿ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಮತ್ತು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ತೊಂದರೆ ಇರುವುದಿಲ್ಲ. ಸರ್ವೇ ನಂಬರ್ 108 ರಲ್ಲಿ 2 ಎಕರೆ ಸರ್ವೇ ನಂಬರ್ 356 ರಲ್ಲಿ 1 ಎಕರೆ 20 ಗುಂಟೆಯ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆ. ಸರ್ವೇ ನಂಬರ್ 108 ರಲ್ಲಿ 2 ಎಕರೆ ಸರ್ವೇ ನಂಬರ್ 356 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಹೊರತುಪಡಿಸಿ ಅದೇ ಸರ್ವೇ ನಂಬರ್ ಗಳಲ್ಲಿ ಬೇರೆ ಜಮೀನಿನು ಇರುವುದಿಲ್ಲ ಎಂದರೆ ಸರಿ.

ಸರ್ವೇ ನಂಬರ್ 108 ರಲ್ಲಿ ಜಮೀನು ಖರೀದಿ ಮಾಡಿಸಿದ ನಂತರ ಸರ್ವೇ ಮಾಡಿಸಿರುತ್ತೇನೆ. ಸರ್ವೇ ಮಾಡಿದ ದಾಖಲೆಗಳು ಈಗ ನನ್ನ ಬಳಿ ಇರುವುದಿಲ್ಲ. ಸದರಿ ಸರ್ವೇಯನ್ನು ಖಾಸಗಿಯವರ ಕಡೆಯವರಿಂದ ಮಾಡಿಸಲಾಗಿರುತ್ತದೆ.

ವಾದಿಯರ ತಂದೆಯವರು ಖರೀದಿಸಿದ ಕ್ರಯ ಪತ್ರದಂತೆ ಸರ್ವೇ ಮಾಡಿಸಿ ಹದ್ದುಬಸ್ತು ಗುರುತಿಸಲು ಎ.ಡಿ.ಎಲ್.ಆರ್ ಬಳಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ವಾದಿರವರ ತಂದೆಯ ಹೆಸರಿಗೆ ಆದ ಕ್ರಯ ಪತ್ರದಂತೆ ಹದ್ದುಬಸ್ತನ್ನು ಗುರುತಿಸಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ತೊಂದರೆ ಇದೆ ಎಂದು ನುಡಿಯುತ್ತಾರೆ. ನಾನು ಖರಿದಿಸಿದ ಸರ್ವೆ ನಂಬರ್ 108 ರ 2 ಎಕರೆ ಜಮೀನಿಗೆ ಹದ್ದುಬಸ್ತು ಮಾಡಿಸಿಕೊಳ್ಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಖರೀದಿಸಿದ ಸ್ವತ್ತಿನ ಹದ್ದುಬಸ್ತು ಮಾಡಿಸಿಕೊಡಲು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಯಾವುದೇ ಹದ್ದುಬಸ್ತು ದಾಖಲೆ ಇಲ್ಲದೇ ವಾದಿಗೆ ಸೇರಿದ ಸ್ವತ್ತು ನನಗೆ ಬರಬೇಕೆಂದು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎ.ಡಿ.ಎಲ್.ಆರ್ ಮತ್ತು ಡಿ.ಡಿ.ಎಲ್.ಆರ್ ಆದೇಶ ಮಾಡಿದ ನಂತರ ವಾದಿರವರಿಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಲು ನಾನು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿರವರ ತಂದೆಯವರು ಖರಿದಿಸಿದ ಕ್ರಯ ಪತ್ರದ ಆಧಾರದಲ್ಲಿ ಅವರ ತಂದೆ ಕಾಲದಿಂದಲೂ ವಾದಿಯವರೇ ಸರ್ವೇ ನಂಬರ್ 108 ರಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಅದೇ ರೀತಿ ಸರ್ವೇ ನಂಬರ್ 356 ರಲ್ಲಿಯೂ ಸ್ವಾಧೀನದಲ್ಲಿ ಇರುತ್ತಾರೆ

ಎಂದರೆ ಸರಿಯಲ್ಲ. ವಾದಿರವರು ಎ.ಡಿ.ಎಲ್.ಆರ್ ರವರ ಮುಂದೆ ಅರ್ಜಿ ಸಲ್ಲಿಸಿದ ವೇಳೆನಲ್ಲಿ ನಾನು ಆರ್.ಐ ಆಗಿ ಕೆಲಸ ನಿರ್ವಹಿಸುತ್ತಿದ್ದರಿಂದ ನನ್ನ ಪ್ರಭಾವವನ್ನು ಬೀರಿ ವಾದಿರವರ ಹೆಸರಿಗೆ 13 ಗುಂಟೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಸ್ವತ್ತಿನ ಹದ್ದುಬಸ್ತು ಗುರುತಿಸಲು ಈಗಲೂ ಸಿದ್ದನಿರುತ್ತೇನೆ ಎಂದರೆ ಸರಿ. ಈಗ ನ್ಯಾಯಾಲಯದಿಂದ ಸರ್ವೇಯವರ್ ಅವರನ್ನು ನೇಮಕ ಮಾಡಿಸಿ ಸರ್ವೇ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ವಾದಿರವರ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿದಾಗಿನಿಂದಲೂ ವಾದಿರವರ ಸೇರಿದ ಆಸ್ತಿಯನ್ನು ಕಬಳಿಸುವ ಸಲುವಾಗಿ ನಾನು ಸರ್ವೇ ಮಾಡಿಸಿ ಹದ್ದುಬಸ್ಸು ಗುರುತಿಸಲು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.